ಯಾವ ಸೊಸೈಟಿಯೇ ಆಗಲಿ ಯಾವಾಗಲೂ 10,000 ರೂಪಾಯಿಗೆ ಮಿಾರಿ ಡಿಪಾಜಿಟ್ಟು ಇಡಕೂಡದು, ಮತ್ತು 10,000 ರೂಪಾಯಿಗೆ ಮಿಾರಿದ ಮೊಬಲಗಿಗೆ ಬಡ್ಡಿ ದೊರಿಯುವದಿಲ್ಲ. ಡಿಪಾಜಿಟ್ಟನ್ನು ವಾಪಸು ತೆಗದುಕೊಳ್ಳಬೇಕಾದರೆ ಚಾಲ್ತಿ ಡಿಪಾಜಿಟ್ಟಿನಿಂದ ಮಾಹೆಯಾನಾ 1,000 ರೂಪಾಯಿಗೆ ಮಿಾರಿ ವಾಪಸು ಅಪೇಕ್ಷಿಸಕೂಡದು. ಆದರೆ ಇದಕ್ಕಿಂತಲೂ ಜಾಸ್ತಿ ಮೊಬಲಗು ವಾಪಸು ತೆಗೆಯಬೇಕಾದರೆ ಬಂದು ತಿಂಗಳಿಗೆ ಮುಂಚಿತವಾಗಿಯೇ ಪೋಸ್ಟ್ಮಾಸ್ಟರಿಗೆ ಲಿಖಿತ ಮೂಲಕ ತಿಳಿಯಪಡಿಸಿ ಆ ರೀತಿ ತೆಗದುಕೊಳ್ಳಬಹುದು. ಎರಡು ಮೂರು ಸಲ ಕಿತ್ತಾವಾರಾಗಿ ಹಣವನ್ನಪೇಕ್ಷಿಸುವ ಪಕ್ಷದಲ್ಲಿ ಎಷ್ಟುಕಿತ್ತಾ ಎಂಬುವದನ್ನೂ, ಯಾವ ತಾರೀಖುಗಳಲ್ಲಿ ಬೇಕಾಗುತ್ತೆಂಬುವದನ್ನೂ ನಮೂದಿಸಬೇಕು.

3. ಇಂಥ "ಪಬ್ಲಿಕ್ ಅಕೌಂಟನ್ನು" ಪೋಸ್ಟಾಫೀಸಿನ ಸೇವಿಂಗ್ಸ್ ಬ್ಯಾಂಕುಗಳಲ್ಲಿಡಲು ಅಪೇಕ್ಷಿಪಡುವ ಸೊಸೈಟಿಗಳು ಈ ಆಫೀಸು ಮೂಲಕ ಪೋಸ್ಟು ಮಾಸ್ಟರ್ ಜನರಲ್ ರವರಿಗೆ ಅರ್ಜಿ ಕಾಗದಿರುವ ನಮೂನೆಯಲ್ಲಿ ದರಖಾಸ್ತು ಬರೆದುಕೊಳ್ಳಬಹುದು.

4. ಈ ಪಬ್ಲಿಕ್ ಅಕೌಂಟಿನ ವಿಷಯವಾಗಿ ಇನ್ನೂ ವಿಶೇಷ ತಿಳಿಯಬೇಕಾದರೆ ಪೋಸ್ಟಲ್ ಗೈಡು (ಏಪ್ರಿಲ್ 1908ನೆ ಇಸವಿ) 194-195ನೆ ಪುಟಗಳನ್ನು ನೋಡಬೇಕು.

ಎಂ. ಶ್ಯಾಮರಾವ್,
ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್.

ಕೊಡಗು ಚೀಫ್ ಕಮಿಷನರವರಿಂದ ಕೊಡೋಣಾದ

ಇಸ್ತಿಹಾರ್‌ನಾಮೆ.

ದರಜಾಗಾ, ಬೆಂಗಳೂರು, ತಾರೀಖು 7ನೆ ಜನವರಿ 1909ನೆ ಇಸವಿ.

ನಂ. 7. ಈ ಮೂಲಕವಾಗಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಸ್ ೧೯೦೯ನೆ ಇಸವಿ ಏಪ್ರಿಲ್ ತಾರೀಖು 1ರ ಲಾಗಾಯಿತು 1910ನೆ ಇಸವಿ ಮಾರ್ಚಿ ತಾರೀಖು 31ರ ವರಿವಿಗೆ ಕೊಡಗು ಸೀಮೆಯಲ್ಲಿ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗಿಯುವದಕ್ಕೊಸ್ಕರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳಲ್ಲದ ಕಸಕಸೆಯಿಂದ ತಯಾರಾದ ನಿಷಾ ವಸ್ತುಗಳನ್ನು ಚಿಲ್ಲರೆಯಾಗಿ ಮಾರುವದಕ್ಕೆ ಸ್ವಾತಂತ್ರ್ಯವನ್ನು ಈ ಕೆಳಗೆ ಕಾಣಿಸಿರುವ ವ್ಯಾರಿಗೆ ಹರಾಜು ಮಾಡಲ್ಪಡುವದು.

(i) 1909ನೆ ಇಸವಿ ಮಾರ್ಚಿ 12ನೆ ತಾರೀಖಿನಲ್ಲಿ ಮಡಿಕೆರಿಯಲ್ಲಿ ಮಡಿಕೆರಿ ತಾಲ್ಲೂಕು ಸುಬೇದಾರರ ಮುಂದೆ.

(ii) 1909ನೆ ಇಸವಿ ಮಾರ್ಚಿ 3ನೆ ತಾರೀಖಿನಲ್ಲಿ ವೀರರಾಜಪ್ಯಾಟೆಯಲ್ಲಿ ಎಡಿನಾಲ್ಕುನಾಡು ತಾಲ್ಲೂಕು ಸುಬೇದಾರರ ಮುಂದೆ.

(iii) 1909ನೆ ಇಸವಿ ಮಾರ್ಚಿ 7ನೆ ತಾರೀಖಿನಲ್ಲಿ ಗೋಣಿಕೊಪ್ಪಲಲ್ಲಿ ಕಿಗ್ಗಟ್ಟುನಾಡು ತಾಲ್ಲೂಕು ಸುಬೇದಾರರ ಮುಂದೆ.

2. ವಿಕ್ರಯವು ಕೊಡಗು ಕಮಿಷನರವರ ಮಂಜೂರಾತಿಗೆ ಒಳಪಟ್ಟಿರುತ್ತದೆ. ಅವರು ಯಾವಕಾರಣವೂ ನಮೂದಿಸದೆ ಚಡದರಖಾಸ್ತುದಾರನಿಗೆ ಲೈಸೆನ್ಸನ್ನು ತಿರಸ್ಕರಿಸಬಹುದು. ಹೆಂಗಸಿಗೆ ಲೈಸೆನ್ಸು ಕೊಡಲ್ಪಡುವದಿಲ್ಲ.

3. ತಾನು ಮೊದಲೇ ದರಖಾಸ್ತು ಮಾಡಿದ ಮೊಬಲಗನ್ನು ಕೊಟ್ಟಿದ್ದ ಪಕ್ಷದಲ್ಲಿ ಚೀಫ್ ಕಮಿಷನರವರಿಂದ ವಿಧಿಸೋಣಾದ ಭಾರಮಿನಲ್ಲಿ ಕಮಿಷನರವರಿಂದ ಮಂಜೂರಾದ ದರಖಾಸ್ತುದಾರನಿಗೆ ಲೈಸೆನ್ಸು ಕೊಡಲ್ಪಡುವದು.

4. ತೊಲ ಬಂದರ 4 ಆಣೆ ಮೇರೆ 80 ತೊಲದ ಸೇರಿಗೆ 20 ರೂಪಾಯಿ ವ್ಯಾರಿಗೆ ಕಮಿಷನರವರಿಂದ ಲೈಸೆನ್ಸುದಾರನಿಗೆ ಅಫೀಂ ಕೊಡಲ್ಪಡುತ್ತೆ.

5. ತೊಲ ಬಂದರ 9 ಆಣೆ ಮೇರೆ 80 ತೊಲದ ಸೇರಿಗೆ ಬಂದೇ ಬೆಲೆಯಾಗಿ 45 ರೂಪಾಯಿ ವ್ಯಾರಿಗೆ ಅಫೀಮನ್ನು ಲೈಸೆನ್ಸುದಾರನು ಜನಗಳಿಗೆ ಮಾರತಕ್ಕದ್ದು.

6. ಚಿಲ್ಲರೆಯಾಗಿ ಮಾರುವ ಅಂಗಡಿಗಳು ಮೂರೇ ಇರುವವು. ಅವು ಯಾವವಂದರೆ :—

ಮಡಿಕೇರಿಯಲ್ಲಿ ಬಂದು.
ವೀರರಾಜಪ್ಯಾಟೆಯಲ್ಲಿ ಬಂದು.
ಗೋಣಿಕೊಪ್ಪಲಲ್ಲಿ ಬಂದು.

7. ಇನ್ನು ಹೆಚ್ಚಿಗೆ ಬೇಕಾಗುವ ತಪ್ಸೀಲುಗಳನ್ನು ಮಡಿಕೇರಿಯಲ್ಲಿ ಕೊಡಗು ಕಮಿಷನರವರಲ್ಲಿ ದರ್ಖಾಸ್ತು ಮಾಡಿ ತಿಳಿದುಕೊಳ್ಳಬಹುದು.

ಟಿ. ಬಿ. ಕೋಪ್ಲಂಡ್,
ಚೀಫ್ ಕಮಿಷನರವರ ಸೆಕ್ರಿಟೆರಿಯವರು.

ಮೈಸೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 18ನೆ ಜನವರಿ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

I. ಮೈಸೂರು ಡಿಸ್ಟ್ರಿಕ್ಟ್ ಟಿ. ನರಸೀಪುರ ತಾಲ್ಲೂಕು ಮುಡಕತೊರೆ ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರ ರಥೋತ್ಸವ ಕಾಲದಲ್ಲಿ ಮುಡಕತೊರೆಯಲ್ಲಿ 1909ನೆ ಇಸವಿ ಜನವರಿ 30ನೆ ತಾರೀಖು ಲಾಗಾಯಿತು 1909ನೆ ಇಸವಿ ಫೆಬ್ರವರಿ 5ನೆ ತಾರೀಖು ವರಿಗೆ ದನಗಳ ಪ್ರದರ್ಶನವು ನಡೆಸಲ್ಪಡುತ್ತದೆ.

II. ಉತ್ತಮವಾದ ರಾಸುಗಳನ್ನು ತರತಕ್ಕವರಿಗೆ ಈ ಕೆಳಗೆ ನಮೂದಾಗುವ ಬಹುಮಾನಗಳು ದೊರೆಯುತ್ತವೆ :—

ಎ. ಕ್ಲಾಸ್ ಎತ್ತುಗಳು ...	1ನೆ ಬಹುಮಾನ	...	20	ರೂಪಾಯಿಗಳು.	ಎ. ಕ್ಲಾಸಿಗೆ ಜುಮ್ಲಾ ರೂಪಾಯಿಗಳು 55.
	2ನೆ ಡಿಟೋ	....	15	ಡಿಟೋ	
	3ನೆ ಡಿಟೋ	...	10	ಡಿಟೋ	
	4ನೆ ಡಿಟೋ	...	10	ಡಿಟೋ	
ಬಿ. ಕ್ಲಾಸ್ ಬೀಜದ ಹೋರಿಗಳು.	1ನೆ ಡಿಟೋ	...	15	ಡಿಟೋ	ಬಿ. ಕ್ಲಾಸಿಗೆ ಜುಮ್ಲಾ ರೂಪಾಯಿಗಳು 25.
	2ನೆ ಡಿಟೋ	...	10	ಡಿಟೋ	
ಸಿ. ಕ್ಲಾಸ್ ಕರುಗಳು ...	ಪ್ರತಿಯೊಂದಕ್ಕೂ 5 ರೂಪಾಯಿನ ಮೇರೆ 4 ಬಹುಮಾನಗಳು.				ಸಿ. ಕ್ಲಾಸಿಗೆ ಜುಮ್ಲಾ ರೂಪಾಯಿಗಳು 20.
			ಜುಮ್ಲಾ		100

III. ಬಹುಮಾನಗಳ ತೀರ್ಮಾನವನ್ನು ಪರೀಕ್ಷಾ ಕರ್ತರಾದ ಪಂಚಾಯಿತರು ಮುಳ್ಳ ಬಂದು ಕವಿಟಿಯವರು ಮಾಡುತ್ತಾರೆ. ಕವಿಟಿಯವರ ತೀರ್ಮಾನವೇ ಆಖೈರು ತೀರ್ಮಾನವಾಗಿರುತ್ತಲ್ಲದೆ ಸದರೀ ತೀರ್ಮಾನಕ್ಕೆ ಅವರು ಕಾರಣಗಳನ್ನು ಕೊಡತಕ್ಕ ಆವಶ್ಯಕವಿರುವದಿಲ್ಲಾ.

IV. ಪ್ರದರ್ಶನ ನಡೆಯುವ ಸ್ಥಳದಲ್ಲಿ ದನಗಳಿಗೆ ಮೇವನ್ನು ನಗದು ಖರೀದಿಗೆ ಸರಬರಾಯಿ ಮಾಡಲು ಏರ್ಪಾಡು ಮಾಡಲ್ಪಡುತ್ತದೆ. ಆದರೆ ದನಗಳ ಮಾಲೀಕರು ಈ ವಿಚಾರದಲ್ಲಿ ಅವರ ಸ್ವಂತ ಏರ್ಪಾಡು ಮಾಡಿಕೊಂಡರೆ ತುಂಬಾ ಅನುಕೂಲವಾಗಿರುತ್ತೆ.

V. ರಾಸುಗಳನ್ನು ಪ್ರದರ್ಶನಕ್ಕೆ ಕಳುಹಿಸಲು ಇಷ್ಟ ಪಡುವವರು ಟಿ. ನರಸೀಪುರ ತಾಲ್ಲೂಕು ಅಮಲ್ದಾರ್ರವರಿಗೆ ರಾಸುಗಳ ತಪಶೀಲು ವಗೈರೆ ನಮೂದಿಸಿ ಪ್ರದರ್ಶನ ಪುರುವಾಗುವದಕ್ಕೆ ಕಡೇಪಕ್ಷ ಎರಡು ದಿವಸಗಳ ಮುಂಚಿತವಾಗಿಯೇ ಅರ್ಜಿ ಮೂಲಕ ತಿಳಿಯಪಡಿಸಿಕೊಳ್ಳಬಹುದು.

VI. ಪ್ರದರ್ಶನಕ್ಕಾಗಿ ಜುನಾಯಿಸಿರುವ ಜಾಗವು ನೀರು ನೆರಳಿನಿಂದ ಅನುಕೂಲವಾಗಿರುವದಲ್ಲದೆ ಈ ಜಾತ್ರೆಗೆ ಮೈಸೂರು ಸೀಮೆಯ ಅನೇಕ ಸ್ಥಳಗಳಿಂದಲೂ ಬ್ರಿಟಿಷ್ ಸೀಮೆಯಿಂದಲೂ ಹೇರಳವಾಗಿ ಜನಗಳು ಬಂದು ಸೇರುವದರಿಂದ ದನಗಳ ವ್ಯಾಪಾರಕ್ಕೆ ವಿಶೇಷ ಅನುಕೂಲತೆಯುಳ್ಳದ್ದಾಗಿದೆ.

ಎಸ್. ಪಿ. ರಾಜಗೋಪಾಲಾಚಾರ್,
ಥರ್ ಡಿಪ್ಯೂಟಿ ಕವಿಷನರ್.